

ಮೂಲತಃ ಪ್ರಜ್ಞೆ ಮೂಡುವುದರ ಸೂಚಕವೂ ಆಗಬಹುದು. ಕಾರಣ, ಯಾವುದೇ ಜೀವಿಯಲ್ಲಿ 'ಸ್ವಂತಿಕೆ'ಯ ಅಥವಾ ತನ್ನ 'ಅಸ್ತಿತ್ವ'ದ ಬಗ್ಗೆ ಅರಿವು ಮೂಡಿದೆ ಎಂದಾದರೆ, ಆ ಜೀವಿಯಲ್ಲಿ ಪ್ರಜ್ಞೆಯೂ ಮೂಡುವ ಸಾಧ್ಯತೆ ಇದೆ ಎಂದರ್ಥ. ಈ 'ಸ್ವಂತಿಕೆ' ಅಥವಾ ಸ್ವ–ಅಸ್ತಿತ್ವದ ಅರಿವು ಮೂಡುವುದರ ಲಕ್ಷಣಗಳೇನು ಎಂದು ಅರಿಯುವ ಪ್ರಯತ್ನದಲ್ಲಿ ವಿಜ್ಞಾನಿಗಳು ಪ್ರಾಣಿಗಳನ್ನು ಪರೀಕ್ಷೆಗೆ ಒಡ್ಡಿದ್ದಾರೆ.

## ಕನ್ನಡಿ ಪ್ರಯೋಗ


'ಇದು ನಾನು'; 'ನಾನು ಎಂದರೆ ಕೇವಲ ಈ ದೇಹವಲ್ಲ; 'ಜೀವ ಅಥವಾ ಆತ್ಮವೂ ಅಲ್ಲ; ಬದಲಿಗೆ ನನ್ನದೇ ಇರುವಿಕೆಯ ಅಸ್ಮಿತೆ'; 'ಆ ನನ್ನದೇ ಅಸ್ಮಿತೆ ಇರುವ ಕಾರಣದಿಂದಾಗಿ, ನನಗೆ ಇತರರಿಂದ ಭಿನ್ನವಾದ ಸ್ಥಿತ್ಯವಿದೆ'... ಆ ಸ್ಥಿತ್ಯವೇ ನಾನು'. ಆ ಸ್ಥಿತ್ಯದ ಅನುಭವವೇ ಪ್ರಜ್ಞೆ ಮೂಡಲು ಕಾರಣ. ಆ ಪ್ರಜ್ಞಾನುಭಾವ ಎಲ್ಲ ಮಾನವರಿಗೂ ಸಹಜ ಎನ್ನಲು ಕಾರಣ, ಅದರ ಬಗ್ಗೆ ನಾವೆಲ್ಲರೂ ನಮ್ಮದೇ ಆವಿಷ್ಕಾರವಾದ ಭಾಷೆಯ ಮೂಲಕ ಸಂವಹಿಸುತ್ತೇವೆ, ಅವಲೋಕಿಸುತ್ತೇವೆ.

'ಕುಣಿಯುವ ಆ ನವಿಲನ್ನು ಕಂಡಾಗ ನನ್ನ ಪ್ರೇಯಸಿ ನೆನಪಾಗುತ್ತಾಳೆ' ಎಂದು ಒಬ್ಬ ಪ್ರೇಮಿ ಹೇಳಿದರೆ ಅದು ಅವನದ್ದೇ ಆದ ವಿಭಿನ್ನ ಅನುಭಾವ, ಎಂದು ಅವನ ಸ್ವಂತ ಅನಿಸಿಕೆಯನ್ನು ನಾವು ಒಪ್ಪಿಕೊಳ್ಳುತ್ತೇವೆ. ಹಾಗಾಗಿ, ಎಲ್ಲ ಮಾನವರಲ್ಲೂ ಸ್ವ–ಅಸ್ತಿತ್ವ ಇರುವುದಕ್ಕೆ ನಾವು ಪುರಾವೆ ಬಯಸುವುದಿಲ್ಲ. ಆದರೆ ಪ್ರಾಣಿಗಳಲ್ಲಿ? ದುರದೃಷ್ಟ ಎಂದರೆ, ಪ್ರಾಣಿಗಳ ಜೊತೆ ಭಾಷೆಯ ಮೂಲಕ ಸಂವಹನ ಸಾಧ್ಯವಿಲ್ಲ. ಆದಕಾರಣ ಅವುಗಳಲ್ಲಿ ಪ್ರಜ್ಞೆಯ ಅನುಭವ ಮೂಡದು ಎಂದು ತೀರ್ಮಾನಿಸುವುದು ನಮ್ಮ ಧಾರ್ಷ್ಟ್ಯವಾಗುತ್ತದೆ. ಅದು ನಮ್ಮ ಬೌದ್ಧಿಕ ಅಹಂಕಾರವಾಗುತ್ತದೆ. ಈ ಅರಿವಿನಲ್ಲಿಯೇ, ಪ್ರಾಣಿಗಳಲ್ಲಿಯೂ ಪ್ರಜ್ಞೆ ಮೂಡಬಲ್ಲದೆ ಎಂದು ಪರೀಕ್ಷಿಸಲು ವಿಜ್ಞಾನಿಗಳು ಹಲವು ರೀತಿಯಲ್ಲಿ ಪ್ರಯತ್ನಿಸಿದ್ದಾರೆ. ಆ ಪ್ರಯತ್ನದಲ್ಲಿ ಅವರು ಸಾಮಾನ್ಯವಾಗಿ 'ಕನ್ನಡಿ ಪ್ರಯೋಗ'ದ ಮೊರೆ ಹೋಗುತ್ತಾರೆ. ಈ ಪ್ರಯೋಗವನ್ನು ಹಲವು ವಿಧಗಳಲ್ಲಿ ಕೈಗೊಳ್ಳಬಹುದಾದರೂ, ಚಿಂಪಾಂಜಿಗಳಲ್ಲಿ ಕೈಗೊಂಡ ಒಂದು ಸರಳವಾದ ಕ್ರಮ ಹೆಚ್ಚು ಪ್ರಸಿದ್ಧಿಯಾಗಿದೆ.


ಮೊದಲಿಗೆ, ಚಿಂಪಾಂಜಿಗಳನ್ನು ಒಂದು ಕನ್ನಡಿಯಲ್ಲಿ ಮೂಡುವ ತಮ್ಮ ಪ್ರತಿಬಿಂಬಗಳನ್ನು ನೋಡಿ ಆ ಅನುಭವ ಪಡೆಯುವಂತೆ ಅವಕ್ಕೆ ಅಭ್ಯಾಸ ನೀಡಲಾಗುತ್ತದೆ. ಅವು ಕನ್ನಡಿಯಲ್ಲಿ ಮೂಡಿರುವ ತಮ್ಮ ಪ್ರತಿಬಿಂಬವನ್ನು ತಮ್ಮದೇ ಎಂದು ಗುರುತಿಸಿಕೊಂಡು, ಇತರರ ಪ್ರತಿಬಿಂಬದಿಂದ ತಮ್ಮದು ಭಿನ್ನ ಎಂದು ಅರಿತರೆ ಅವಕ್ಕೆ ತಮ್ಮದೇ ಆದ ಸ್ವಂತಿಕೆ ಇದೆ ಎಂದರ್ಥ. ಆದರೆ ಕನ್ನಡಿಯಲ್ಲಿ ಮೂಡಿರುವುದು ತನ್ನದೇ ಪ್ರತಿಬಿಂಬ ಎಂದು ಅವಕ್ಕೆ ತಿಳಿದಿದೆ ಎಂದು ನಾವು ತಿಳಿಯುವುದಾದರೂ ಹೇಗೆ? ಇದನ್ನು ಪರೀಕ್ಷಿಸಲು ಆ ಪ್ರಾಣಿಗಳನ್ನು ಒಂದು ನಿರ್ಣಾಯಕ ಪರೀಕ್ಷೆಗೆ ಒಡ್ಡಲಾಗುತ್ತದೆ. ಕನ್ನಡಿಯ ಅನುಭವಕ್ಕೆ ಒಳಪಡಿಸಿರುವ ಯಾವುದಾದರೂ ಚಿಂಪಾಂಜಿ ನಿದ್ರಿಸುತ್ತಿರುವಾಗ ಅದರ ಹಣೆಯ ಮೇಲೆ ಬಣ್ಣದಲ್ಲಿ ಸ್ಪಷ್ಟವಾಗಿ ಕಾಣುವಂತೆ ಒಂದು ಗುರುತು ಹಚ್ಚಲಾಗುತ್ತದೆ. ನಂತರ ಅದು ಎಚ್ಚರಗೊಂಡಾಗ ಮತ್ತೆ ಅದನ್ನು ಕನ್ನಡಿಯ ಮುಂದೆ ತರಲಾಗುತ್ತದೆ. ಆಗ ಆ ಚಿಂಪಾಂಜಿಯು ಕನ್ನಡಿಯಲ್ಲಿ ಮೂಡಿದ ಬಿಂಬದಲ್ಲಿ ಹಣೆಯ ಮೇಲಿರುವ ಗುರುತು ತನ್ನದೇ ಎಂದು ಗುರುತಿಸಿ ಅದನ್ನು ಮುಟ್ಟಿ ನೋಡಿಕೊಳ್ಳುವ ಅಥವಾ ಅದನ್ನು ಅಳಿಸುವ ಅಥವಾ ಅಂತಹ ಯಾವುದೇ ಪ್ರಯತ್ನಕ್ಕೆ ಕೈಹಾಕಿದರೆ, ಆಗ ಅದಕ್ಕೆ ಕನ್ನಡಿಯಲ್ಲಿ ಮೂಡಿರುವ ಬಿಂಬ ತನ್ನದು ಎಂಬ ಪ್ರಜ್ಞೆ ಇದೆ ಎಂದೂ, ಹಾಗಾಗಿ ಆ ಚಿಂಪಾಂಜಿಗೆ ತನ್ನ ಅಸ್ತಿತ್ವದ ಅರಿವಿದೆ ಎಂದೂ ಖಾತ್ರಿಯಾಗುತ್ತದೆ. ಈ ಪ್ರಯೋಗದ ಮೂಲಕ ನಮ್ಮ ಅತೀ ಹತ್ತಿರದ ಪ್ರಭೇದವಾದ ಚಿಂಪಾಂಜಿಗೆ 'ತಾನು', 'ತನ್ನದು' ಎಂಬ ಪ್ರಜ್ಞೆ ಇದೆ ಎಂದು ತೋರಿಸಲಾಗಿದೆ.

ಕುತೂಹಲಕರ ವಿಷಯವೆಂದರೆ, ಇಂತಹ 'ಕನ್ನಡಿ ಪ್ರಯೋಗ'ಗಳ ಮೂಲಕ ಚಿಂಪಾಂಜಿಗಳಷ್ಟೇ ಅಲ್ಲದೆ ಆನೆಗಳಿಗೂ, ಕೆಲವು ಪಕ್ಷಿಗಳಿಗೂ, ಡಾಲ್ಫಿನ್‌ಗಳಿಗೂ ಈ ಸ್ವಂತಿಕೆಯ ಪ್ರಜ್ಞೆ ಇದೆ ಎಂದು ತೋರಿಸಲಾಗಿದೆ. ಆದರೆ ಈ ಸ್ವಂತಿಕೆಯನ್ನು ಗುರುತಿಸುವ ಪ್ರಜ್ಞೆ ಇದೆ ಎಂದಾಕ್ಷಣ ಆ ಪ್ರಾಣಿಗಳಲ್ಲಿಯೂ ನಮ್ಮಲ್ಲಿ ನೆಲೆಗೊಂಡಿರುವಂತಹುದೇ ಪ್ರಜ್ಞೆ ಇದೆ ಎಂದು ಅರ್ಥವೇ? ನಮ್ಮ ಪ್ರಜ್ಞೆಗೆ ತನ್ನನ್ನೇ ಪ್ರಶ್ನಿಸಿಕೊಳ್ಳುವ, ತನ್ನನ್ನೇ ಹುಡುಕಿಕೊಳ್ಳುವ ಶಕ್ತಿ ಇದೆ. ಆದರೆ ಚಿಂಪಾಂಜಿಗಳ ಪ್ರಜ್ಞೆಗೆ? ಬಹುಶಃ ಇರಲಾರದು ಎನ್ನುವುದು ಸಾಮಾನ್ಯ ನಂಬಿಕೆ. ಹಾಗೆ ನಂಬುವುದು ನಮ್ಮ ಬೌದ್ಧಿಕ ಸೊಕ್ಕಿನ ಪರಿಣಾಮ ಎಂದೂ ಹೇಳಬಹುದೇನೋ! ಆದರೆ, ಇಡೀ ಜೀವ ಪ್ರಪಂಚವನ್ನು ಒಟ್ಟಾಗಿ ಪರಿಗಣಿಸಿದಾಗ ಮಾನವನ ಪ್ರಜ್ಞೆ ವಿಭಿನ್ನ ಎಂಬ ನಂಬಿಕೆ ಸತ್ಯಕ್ಕೆ ಹತ್ತಿರ ಎನ್ನುವುದು ಖಚಿತ. ಉದಾಹರಣೆಗೆ, ನರಮಂಡಲ ಇರುವ ಕೀಟಗಳಲ್ಲಿ, ಅಥವಾ ನರಮಂಡಲವೇ ಇಲ್ಲದ ಸಸ್ಯಗಳಲ್ಲಿ ಈ ಸ್ವಂತಿಕೆಯ ಭಾವ ಮೂಡಲು ಸಾಧ್ಯವಿಲ್ಲ ಎಂದೇ ಹೇಳಬಹುದು. ಹಾಗಾಗಿ, ಮಾನವರಲ್ಲಿ ಮೂಡುವ ಚಿಂತನಾಶೀಲ ಪ್ರಜ್ಞಾಸ್ಥಿತಿ, ತನ್ನನ್ನೇ ಪ್ರಶ್ನಿಸಿಕೊಳ್ಳುವ ಸರ್ವೋಚ್ಚ ಸ್ಥಿತಿಯ ಪ್ರಜ್ಞೆ, ಇತರೆ ಪ್ರಾಣಿಗಳಲ್ಲಿಯೂ ಮೂಡುತ್ತದೆ ಎಂದು ಹೇಳಲು ಯಾವುದೇ ಪುರಾವೆ ಇಲ್ಲ.

ಒಟ್ಟಿನಲ್ಲಿ ಇತರೆ ಜೀವಿಗಳಲ್ಲಿ ಇದೆಯೋ ಇಲ್ಲವೋ ತಿಳಿಯದಾದರೂ, ಮಾನವನಲ್ಲಿ ಮೂಡುವ ಪ್ರಜ್ಞೆ, ತನ್ನನ್ನು ತಾನೆ ಗುರುತಿಸಬಲ್ಲ, ತನ್ನನ್ನು ತಾನೇ ಅರಿಯಲು ಪ್ರಯತ್ನಿಸುವ, ತನ್ನ ಆದಿಯನ್ನು ತಿಳಿಯುವತ್ತ ಹಾತೊರೆಯುವ, ಒಂದು ಶಕ್ತಿ ಎನ್ನುವುದಂತೂ ಸತ್ಯ. ಹಾಗೆ ತನ್ನನ್ನು




ಬ್ರಹ್ಮಪುತ್ರ ನದಿಯ ಪಾತ್ರವು ಅಂಕುಡೊಂಕಾಗಿ ಕಂಡರೂ, ಅದು ಸುತ್ತಲಿನ ಭೌಗೋಳಿಕ ಸ್ಥಿತಿಗೆ ಅನುಗುಣವಾಗಿಯೇ ಹರಿಯುತ್ತದೆ



5. Jonathan Birch, Alexandra K. Schnell and Nicola S. Clayton, 2020, Dimensions of animal consciousness. Trends in Cognitive Sciences, 24(10): 789801. https://doi.org/10.1016/j.tics.2020.07.007